# [1]ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಭೂಮಿಯನ್ನು ಸ್ವಇಚ್ಛೆಯಿಂದ ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆ) ನಿಯಮಗಳು, 1991

**ವಿಷಯಾನುಕ್ರಮಣಿಕೆ**


ನಿಯಮಗಳು . . . . . . . . . . . . . . . . ಪುಟ ಸಂಖ್ಯೆ

1. ಹೆಸರು ಮತ್ತು ಪ್ರಾರಂಭ . . . . . . . . . . . . . . . . 161
2. ಪರಿಭಾಷೆಗಳು . . . . . . . . . . . . . . . . 162
    (ಎ) ಅಧಿನಿಯಮ . . . . . . . . . . . . . . . . 162
    (ಬಿ) ಪ್ರಾಧಿಕಾರ . . . . . . . . . . . . . . . . 162
    (ಸಿ) ಪ್ರಪತ್ರ . . . . . . . . . . . . . . . . 162
    (ಡಿ) ಇತರ ಪದಗಳು ಮತ್ತು ಅಭಿವ್ಯಕ್ತಿಗಳು . . . . . . . . . . . . 162
3. ನಿವೇಶನಗಳ ಹಂಚಿಕೆ . . . . . . . . . . . . . . . . 162
4. ಹಂಚಿಕೆಯ ಷರತ್ತುಗಳು . . . . . . . . . . . . . . . . 162
5. ಹಂಚಿಕೆಗಾಗಿ ಅರ್ಜಿ . . . . . . . . . . . . . . . . 163
6. ನಿವೇಶನ ಮೌಲ್ಯದ ಸಂದಾಯ . . . . . . . . . . . . . . . . 163
7. ಹಸ್ತಾಂತರಣ ಪತ್ರವನ್ನು ಬರೆದುಕೊಡುವುದು . . . . . . . . . . . . 164
8. ಸ್ವಇಚ್ಛೆಯಿಂದ ಬಿಟ್ಟುಕೊಡುವುದು . . . . . . . . . . . . . . 164

ಪ್ರಪತ್ರ ಸಂಖ್ಯೆ I-II . . . . . . . . . . . . . . . . 164 – 167

ಅನುಬಂಧ . . . . . . . . . . . . . . . . 167 – 168

ತಿದ್ದುಪಡಿ ನಿಯಮಗಳು . . . . . . . . . . . . . . . . 169


---

**(ಅಧಿಸೂಚನೆ ಸಂಖ್ಯೆ ನಆಇ 3 ಎಂಐಬಿ 98, ದಿನಾಂಕ 17–4–1998ರ ಅನ್ವಯ ತಿದ್ದುಪಡಿ ಮಾಡಲ್ಪಟ್ಟಿದೆ)**

ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987ರ (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34) 71ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ.–

**1. ಹೆಸರು ಮತ್ತು ಪ್ರಾರಂಭ.**–(1) ಈ ನಿಯಮಗಳನ್ನು **ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಭೂಮಿಯನ್ನು ಸ್ವಇಚ್ಛೆಯಿಂದ ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆ) ನಿಯಮಗಳು, 1991** ಎಂದು ಕರೆಯತಕ್ಕದ್ದು.

(2) ಅವುಗಳು 1991ರಿಂದ ಜಾರಿಯಲ್ಲಿ ಬಂದಿರುವುದಾಗಿ ಭಾವಿಸತಕ್ಕದ್ದು.

---

1. ದಿನಾಂಕ 3–2–1994ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ಹೆಚ್‌ಯುಡಿ 205 ಎಂಐಬಿ 90, ದಿನಾಂಕ 29–1–1994.

**2. ಪರಿಭಾಷೆಗಳು.**–ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.–

(ಎ) "**ಅಧಿನಿಯಮ**" ಎಂದರೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34);

(ಬಿ) "**ಪ್ರಾಧಿಕಾರ**" ಎಂದರೆ ನಗರಾಭಿವೃದ್ಧಿ ಪ್ರಾಧಿಕಾರ;

(ಸಿ) "**ಪ್ರಪತ್ರ**" ಎಂದರೆ ಈ ನಿಯಮಗಳಿಗೆ ಸೇರಿಸಿರುವ ಪ್ರಪತ್ರ;

(ಡಿ) ಇದರಲ್ಲಿ ಉಪಯೋಗಿಸಲಾಗಿರುವ ಆದರೆ, ಪರಿಭಾಷಿಸದಿರುವ ಎಲ್ಲಾ ಇತರ ಪದಗಳು ಮತ್ತು ಅಭಿವ್ಯಕ್ತಿಗಳು, ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34)ರಲ್ಲಿ ಅನುಕ್ರಮವಾಗಿ ಅವುಗಳಿಗೆ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ನಿವೇಶನಗಳ ಹಂಚಿಕೆ.**–ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನಗಳ ಹಂಚಿಕೆ) ನಿಯಮಗಳು, 1991ರಲ್ಲಿ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಮತ್ತು 4ನೇ ನಿಯಮದ ಉಪಬಂಧಗಳಿಗೆ ಒಳಪಟ್ಟು ಪ್ರಾಧಿಕಾರವು ಭೂ ಅರ್ಜನೆಯನ್ನು ತ್ವರಿತಗೊಳಿಸುವ ದೃಷ್ಟಿಯಿಂದ, ಈ ನಿಯಮಗಳಿಗೆ ಸೇರಿಸಲಾದ ಅನುಬಂಧಗಳ ಪ್ರಕಾರ ಭೂ ಮಾಲೀಕನಿಗೆ ಪ್ರೋತ್ಸಾಹಕವಾಗಿ.–

(i) ಭೂ ಅರ್ಜನಾ ಅಧಿನಿಯಮ, 1894ರ 9ನೇ ಪ್ರಕರಣದ ಮೇರೆಗೆ ನೀಡಲಾದ ನೋಟೀಸಿಗೆ ಉತ್ತರವಾಗಿ ಅವನು ಸ್ವಇಚ್ಛೆಯಿಂದ ಪ್ರಾಧಿಕಾರದ ಪರವಾಗಿ ಸದರಿ ಅಧಿನಿಯಮದ ಮೇರೆಗೆ ಡೆಪ್ಯುಟಿ ಕಮೀಷನರು ಅರ್ಜಿಸಬೇಕಾಗಿರುವ ಭೂಮಿಯನ್ನು ಯಾವುದೇ ಇತರ ಆಕ್ಷೇಪಣೆಗಳಿಂದ ಮತ್ತು ಯಾವುದೇ ಅನಧಿಕೃತ ನಿರ್ಮಾಣದಿಂದ ಮುಕ್ತವಾಗಿರುವ ಮತ್ತು ಪ್ರಾಧಿಕಾರದಲ್ಲಿ ನಿಹಿತವಾಗುವ ಸದರಿ ಭೂಮಿಯನ್ನು ಡೆಪ್ಯುಟಿ ಕಮೀಷನರ ಸ್ವಾಧೀನಕ್ಕೆ ಒಪ್ಪಿಸಿದಲ್ಲಿ; ಅಥವಾ

(ii) ಅಧಿನಿಯಮದ 35ನೇ ಪ್ರಕರಣದ ಮೇರೆಗೆ ಅವನ ಭೂಮಿಯನ್ನು ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡಲ್ಲಿ, ನಿವೇಶನಗಳನ್ನು ಹಂಚಬಹುದು:

ಪರಂತು, ಅಂಥ ಭೂಮಿಯ ಸಂಬಂಧದಲ್ಲಿ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಜಂಟಿಯಾಗಿ ಮಾಲೀಕತ್ವ ಹೊಂದಿದ್ದಲ್ಲಿ, ಈ ನಿಯಮಗಳಿಗೆ ಅನುಸಾರವಾಗಿ ಅಂಥ ಎಲ್ಲಾ ವ್ಯಕ್ತಿಗಳು ಸ್ವಇಚ್ಛೆಯಿಂದ ಸ್ವಾಧೀನತೆಯನ್ನು ವಹಿಸಿಕೊಟ್ಟ ಹೊರತು, ಅವರ ಪೈಕಿ ಯಾರೊಬ್ಬರಿಗಾಗಲೀ ಹಂಚಿಕೆಯ ಅರ್ಹತೆಯು ಪ್ರಾಪ್ತವಾಗುವುದಿಲ್ಲ.

**ವಿವರಣೆ.**–ಈ ನಿಯಮಗಳ ಪ್ರಾರಂಭಕ್ಕೆ ಮುಂಚೆ ಭೂ ಸ್ವಾಧೀನತೆಯನ್ನು ವಹಿಸಿಕೊಡದ ಒಬ್ಬ ವ್ಯಕ್ತಿಯನ್ನು ಎಲ್ಲಾ ಅನಧಿಕೃತ ನಿರ್ಮಾಣಗಳಿಂದ ಮುಕ್ತವಾಗಿ ಮತ್ತು ಸ್ವಾಧೀನಕ್ಕೆ ಸಂಬಂಧಪಟ್ಟ ಎಲ್ಲಾ ಆಕ್ಷೇಪಣೆಗಳನ್ನು, ಅಂಥ ಆಕ್ಷೇಪಣೆಗಳನ್ನು ನ್ಯಾಯಾಲಯದಲ್ಲಿ ಸಲ್ಲಿಸಿರಲಿ ಅಥವಾ ಇಲ್ಲದಿರಲಿ ಹಿಂತೆಗೆದುಕೊಂಡ ತರುವಾಯ ಅಂಥ ಭೂಮಿಯ ಸ್ವಾಧೀನತೆಯನ್ನು ಅಂಥ ಪ್ರಾರಂಭದ ತರುವಾಯ ಸ್ವಇಚ್ಛೆಯಿಂದ ವಹಿಸಿಕೊಟ್ಟಿರುವನೆಂದು ಭಾವಿಸತಕ್ಕದ್ದು.

**4. ಹಂಚಿಕೆಯ ಷರತ್ತುಗಳು.**–3ನೇ ನಿಯಮದ ಮೇರೆಗಿನ ಹಂಚಿಕೆಯು, ಈ ಮುಂದಿನ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.–

(ಎ) ಹಂಚಿಕೆ ಪಡೆದವನು, ಸಾಮಾನ್ಯ ಪ್ರವರ್ಗಕ್ಕೆ ಹಂಚಿಕೆಗಾಗಿ ಪ್ರಾಧಿಕಾರದಿಂದ ನಿಗದಿತವಾದ [1][ನಿವೇಶನದ ಮೌಲ್ಯದ ಪೂರ್ತಾ ಹಣವನ್ನು] ಸಂದಾಯ ಮಾಡಲು

1. "ನಿವೇಶನದ ಮೌಲ್ಯದ ಶೇಕಡಾ 50ನ್ನು" ಎಂಬ ಪದಗಳ ಮತ್ತು ಅಂಕಿಗಳ ಬದಲಾಗಿ ಅಧಿಸೂಚನೆ ಸಂಖ್ಯೆ ನಅಇ 2 ಎಂಐಬಿ 98, ದಿನಾಂಕ 17-4-1998ರ ಅನ್ವಯ ಪ್ರತಿಯೋಜಿಸಲಾಗಿದೆ.





ಬದ್ಧನಾಗಿರತಕ್ಕದ್ದು ಮತ್ತು ಕಾಲಕಾಲಕ್ಕೆ ಈ ಸಂಬಂಧವಾಗಿ ಪ್ರಾಧಿಕಾರವು ವಿಧಿಸಬಹುದಾದ ಯಾವುದೇ ಇತರ ಶುಲ್ಕಗಳನ್ನು ಸಹ ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು;

(ಬಿ) ನಿವೇಶನವನ್ನು ಯಾವ ಲೇಔಟ್‌ನಲ್ಲಿ ರಚಿಸಬೇಕೆಂದು ಭೂಮಿಯನ್ನು ಅರ್ಜಿಸಲಾಗಿದೆಯೋ ಆ ಲೇಔಟ್‌ಗೆ ಆದ್ಯತೆ ನೀಡಿ ಪ್ರಾಧಿಕಾರದ ವಿವೇಚನೆಯ ಮೇರೆಗೆ ಹಂಚತಕ್ಕದ್ದು ಮತ್ತು ಸದರಿ ಲೇಔಟ್‌ನಲ್ಲಿ ಅಂಥ ಹಂಚಿಕೆಯು ಸಾಧ್ಯವಾಗದಿದ್ದರೆ, ಸದರಿ ಲೇಔಟ್‌ಗಳ ತರುವಾಯ ರಚಿತವಾದ ಯಾವುದೇ ಇತರ ಲೇಔಟ್‌ನಲ್ಲಿ ಹಂಚತಕ್ಕದ್ದು;

(ಸಿ) ಸ್ವಾಧೀನತೆಯನ್ನು ಡೆಪ್ಯುಟಿ ಕಮೀಷನರಿಗೆ ವಹಿಸಿಕೊಡುವ ಭೂಮಿಯ ಮೇಲೆ ತನ್ನ ನಿರುಪಾಧಿಕ ಸ್ವಾಮ್ಯ ಇದೆಯೆಂದು ಪ್ರಾಧಿಕಾರಕ್ಕೆ ಮನದಟ್ಟಾಗುವಂತೆ ಹಂಚಿಕೆದಾರನು ರುಜುವಾತುಪಡಿಸಿದ ಹೊರತು, ಅವನು, ಈ ನಿಯಮಗಳ ಮೇರೆಗೆ ಹಂಚಿಕೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದಲ್ಲ;

(ಡಿ) ಅಂಥ ಭೂಮಿಯನ್ನು ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಜಂಟಿಯಾಗಿ ಮಾಲೀಕತ್ವ ಹೊಂದಿದ್ದರೆ, ಈ ನಿಯಮಗಳ ಮೇರೆಗೆ ಹಂಚಲಾದ ನಿವೇಶನಕ್ಕೆ ಅವರು ಒಟ್ಟಾಗಿಯೇ ಹಕ್ಕುಳ್ಳವರಾಗಿರತಕ್ಕದ್ದು;

(ಇ) ಹಂಚಿಕೆ ಪಡೆದವನು ಈಗಾಗಲೇ ಹೊಂದಿರುವ ಭೂಮಿ, ಯಾವುದಾದರೂ ಇದ್ದರೆ ಅದೂ ಸೇರಿ 3ನೇ ನಿಯಮದ ಮೇರೆಗೆ ಹಂಚಿಕೆಯಾದ ಭೂಮಿಯ ಒಟ್ಟು ವಿಸ್ತೀರ್ಣವು, ನಗರ ಪ್ರದೇಶ ಭೂ (ಗರಿಷ್ಠ ಪರಿಮಿತಿ ಮತ್ತು ವಿನಿಯಮನ) ಅಧಿನಿಯಮ, 1976ರ 4ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಲಾಗಿರುವ ಗರಿಷ್ಠ ಪರಿಮಿತಿಯನ್ನು ಮೀರತಕ್ಕದ್ದಲ್ಲ;

(ಎಫ್) ಹಂಚಿಕೆಯು ಪೂರ್ಣ ಮಾರಾಟ ಆಧಾರದ ಮೇಲಿರತಕ್ಕದ್ದು, ಹಂಚಿಕೆ ಪಡೆದವನು ಕ್ರಯಪತ್ರವನ್ನು ಪಡೆಯುವುದಕ್ಕಾಗಿ ತಗಲುವ ಅವಶ್ಯ ನೋಂದಣಿ ಮತ್ತು ಇತರ ವೆಚ್ಚಗಳನ್ನು ಭರಿಸತಕ್ಕದ್ದು.

**5. ಹಂಚಿಕೆಗಾಗಿ ಅರ್ಜಿ.**–(1) ಈ ನಿಯಮಗಳ ಮೇರೆಗಿನ ಹಂಚಿಕೆಯ ಬಗೆಗಿನ ಅರ್ಜಿಯು ಪ್ರಪತ್ರ 1ರಲ್ಲಿರತಕ್ಕದ್ದು ಮತ್ತು ಪ್ರಾಧಿಕಾರದ ಹೆಸರಿನಲ್ಲಿ ಒಂದು ನೂರು ರೂಪಾಯಿಗಳ ಡಿಮಾಂಡ್ ಡ್ರಾಫ್ಟ್ ರೀತಿಯ ಫೀಜಿನೊಂದಿಗಿರತಕ್ಕದ್ದು.

(2) ಅರ್ಜಿದಾರನು ಸದರಿ ಅರ್ಜಿಯಲ್ಲಿ ಒದಗಿಸಲಾದ ವಿವರಣೆಗಳು ಯಾವುದೇ ವಿಷಯದ ಸಂಬಂಧದಲ್ಲಿ ಸರಿಯಾದುದಲ್ಲವೆಂದು ಅಥವಾ ಸುಳ್ಳು ಎಂದು ಕಂಡುಬಂದರೆ ಠೇವಣಿ ಇಡಲಾದ ನಿವೇಶನ ಮೌಲ್ಯವನ್ನು ಮುಟ್ಟುಗೋಲು ಹಾಕತಕ್ಕದ್ದು ಮತ್ತು ನಿವೇಶನ ಹಂಚಿಕೆಯಾಗಿದ್ದರೆ, ಅದನ್ನು ಪ್ರಾಧಿಕಾರವು ಪುನಃ ವಹಿಸಿಕೊಳ್ಳತಕ್ಕದ್ದು.

**6. ನಿವೇಶನ ಮೌಲ್ಯದ ಸಂದಾಯ.**–ಹಂಚಿಕೆ ಪಡೆದವನು, ಹಂಚಿಕೆಯ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ, ನಿವೇಶನದ ಪೂರ್ಣ ಮೌಲ್ಯವನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕದ್ದು. ಸದರಿ ಮೌಲ್ಯವನ್ನು, ತೊಂಬತ್ತು ದಿನಗಳ ಅವಧಿಯೊಳಗೆ ಪೂರ್ಣವಾಗಿ ಸಂದಾಯ ಮಾಡದಿದ್ದರೆ, ಕಮೀಷನರು ಹಂಚಿಕೆ ಪಡೆದವನ ಅರ್ಜಿಯ ಮೇಲೆ ತೊಂಬತ್ತು ದಿನಗಳನ್ನು ಮೀರದ ಹೆಚ್ಚಿನ ಅವಧಿಯವರೆಗೆ ಸಂದಾಯಕ್ಕಾಗಿ ಅವಧಿಯನ್ನು ವಿಸ್ತರಿಸಬಹುದು ಮತ್ತು ಹಂಚಿಕೆ ಪಡೆದವನು ವಿಸ್ತೃತ ತೊಂಬತ್ತು ದಿನಗಳ ಅವಧಿಗೆ ನಿವೇಶನ ಮೌಲ್ಯದ ಬಾಕಿಯ ಮೇಲೆ ವರ್ಷವೊಂದಕ್ಕೆ ಶೇಕಡಾ ಹನ್ನೆರಡೂವರೆ ಬಡ್ಡಿದರದೊಂದಿಗೆ ಸಂದಾಯ ಮಾಡತಕ್ಕದ್ದು. ಅಂಥ

ವಿಸ್ತೃತ ಅವಧಿಯು ಕೊನೆಗೊಳ್ಳುವ ಮುಂಚೆಯೂ ಸಹ ಪೂರ್ಣ ಮೊತ್ತವನ್ನು ಸಂದಾಯ ಮಾಡದಿದ್ದಲ್ಲಿ, ಮುಂದಿನ ಸೂಚನೆ ಕೊಟ್ಟು ರದ್ದುಗೊಳಿಸತಕ್ಕದ್ದು ಮತ್ತು ಹಂಚಿಕೆ ಪಡೆದವನು ನಿವೇಶನ ಮೌಲ್ಯದ ಸಂಬಂಧದಲ್ಲಿ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ಠೇವಣಿ ಇಟ್ಟಿದ್ದರೆ ಅವನಿಗೆ ಮರು ಸಂದಾಯ ಮಾಡತಕ್ಕದ್ದು.

7. **ಹಸ್ತಾಂತರಣ ಪತ್ರವನ್ನು ಬರೆದುಕೊಡುವುದು.**–(1) ನಿವೇಶನ ಮೌಲ್ಯವನ್ನು ಪೂರ್ಣವಾಗಿ ಸಂದಾಯ ಮಾಡಿದ ತರುವಾಯ ಕಮೀಷನರು, ಹಂಚಿಕೆ ಪಡೆದವನ ಕೋರಿಕೆಯ ಮೇರೆಗೆ ಪ್ರಪತ್ರ IIರಲ್ಲಿ ನಿರ್ದಿಷ್ಟಪಡಿಸಿರುವ ನಿಬಂಧನೆಗಳು, ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು ಹಸ್ತಾಂತರಣ ಪತ್ರವನ್ನು ಬರೆದುಕೊಡತಕ್ಕದ್ದು.

(2) ನಿವೇಶನವನ್ನು ವಾಸದ ಉದ್ದೇಶಗಳಿಗೆ ಮಾತ್ರ ಉಪಯೋಗಿಸತಕ್ಕದ್ದು. ಭೂಮಿಯ ಉಪಯೋಗದ ಯಾವುದೇ ಬದಲಾವಣೆಗಾಗಿ ಕರ್ನಾಟಕ ಪಟ್ಟಣ ಮತ್ತು ನಗರ ಯೋಜನೆ ಅಧಿನಿಯಮ, 1961ರ ಮೇರೆಗೆ ಯುಕ್ತ ಪ್ರಾಧಿಕಾರದ ಪೂರ್ವಾನುಮತಿಯು ಅವಶ್ಯಕವಾಗಿರತಕ್ಕದ್ದು.

(3) ನಿವೇಶನವು ಮೂಲತಃ ಹಂಚಿಕೆಯಾದ ಉದ್ದೇಶಕ್ಕಾಗಿ ಮಾತ್ರವೇ ಉಪಯೋಗಿಸುವುದನ್ನು ಮುಂದುವರಿಸುವವರೆಗೆ ಅದರ ಹಸ್ತಾಂತರಣಕ್ಕಾಗಿ ಪ್ರಾಧಿಕಾರದ ಅನುಮತಿಯು ಅವಶ್ಯವಾಗಿರತಕ್ಕದ್ದಲ್ಲ.

8. **ಸ್ವಇಚ್ಛೆಯಿಂದ ಬಿಟ್ಟುಕೊಡುವುದು.**–ಹಂಚಿಕೆ ಪಡೆದವನು, ಹಂಚಿಕೆಯ ತರುವಾಯ ಯಾವುದೇ ಕಾಲದಲ್ಲಿ, ಪ್ರಾಧಿಕಾರದಿಂದ ತನಗೆ ಹಂಚಿಕೆಯಾದ ನಿವೇಶನವನ್ನು ಬಿಟ್ಟುಕೊಡಬಹುದು ಹಾಗೇ ಬಿಟ್ಟುಕೊಟ್ಟ ಮೇಲೆ ಸಾಧ್ಯವಾದಷ್ಟು ವಿಳಂಬವಿಲ್ಲದೆ, ಸದರಿ ನಿವೇಶನದ ಬೆಲೆಯ ಸಂಬಂಧದಲ್ಲಿ ಹಂಚಿಕೆ ಪಡೆದವನು ಪ್ರಾಧಿಕಾರಕ್ಕೆ ಸಂದಾಯ ಮಾಡಿದ ಎಲ್ಲಾ ಮೊಬಲಗನ್ನು ಮರು ಸಂದಾಯ ಮಾಡತಕ್ಕದ್ದು.

## ಪ್ರಪತ್ರ I
[ನಿಯಮ 5(1)ನ್ನು ನೋಡಿ]

**ನಗರಾಭಿವೃದ್ಧಿ ಪ್ರಾಧಿಕಾರ (ಸ್ವಇಚ್ಛೆಯಿಂದ ಭೂಮಿಯನ್ನು ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆ) ನಿಯಮಗಳು, 1989ರ ಮೇರೆಗೆ ನಿವೇಶನದ ಹಂಚಿಕೆಗಾಗಿ ಅರ್ಜಿ ಪ್ರಪತ್ರ**

| | | | |
|---|---|---|---|
| 1. | ಅರ್ಜಿದಾರನ ಹೆಸರು (ಸ್ಪಷ್ಟ ಅಕ್ಷರಗಳಲ್ಲಿ) | | |
| 2. | ತಂದೆಯ ಹೆಸರು/ಗಂಡನ ಹೆಸರು | | |
| 3. | ಜನ್ಮ ದಿನಾಂಕ | | |
| 4. | ಅರ್ಜಿದಾರನ ವಿಳಾಸ | | |
| 5. | ಭೂಮಿಯಲ್ಲಿ ಹಿತಾಸಕ್ತಿ ಇರುವ ಎಲ್ಲಾ ವ್ಯಕ್ತಿಗಳ ಹೆಸರು ಮತ್ತು ವಿಳಾಸ | | |
| 6. | ಅರ್ಜಿಸಬೇಕೆಂದು/ಖರೀದಿಸಬೇಕೆಂದು ಪ್ರಸ್ತಾವಿಸಲಾಗಿರುವ ಭೂಮಿಗಳ ವಿವರಗಳು: | | |
| | (ಎ) | ಸರ್ವೆ ನಂಬರ್ | |





| | | | |
|---|---|---|---|
| | (ಬಿ) | ಸ್ಥಳ | |
| | (ಸಿ) | ವಿಸ್ತೀರ್ಣ | |
| | (ಡಿ) | ಭೂ ಅರ್ಜನೆಯ ಬಗೆಗಿನ ಅಧಿಸೂಚನೆಯ ಸಂಖ್ಯೆ, ದಿನಾಂಕ ಮತ್ತು ವಿವರಗಳು | |
| 7. | ಸ್ವಇಚ್ಛೆಯಿಂದ ಬಿಟ್ಟುಕೊಡಲಾದ ಭೂಮಿಯ ವಿವರಗಳು: | | |
| | (ಎ) | ಸರ್ವೆ ನಂಬರ್ | |
| | (ಬಿ) | ಸ್ಥಳ | |
| | (ಸಿ) | ವಿಸ್ತೀರ್ಣ | |
| 8. | ಭೂಮಿಯ ಬಗೆಗಿನ ಅರ್ಜಿದಾರನ ಸ್ವಾಮ್ಯದ ವಿವರಗಳು (ಪತ್ರದ ಪ್ರತಿಯನ್ನು ಲಗತ್ತಿಸತಕ್ಕದ್ದು) | | |
| 9. | ಭೂಮಿಯ ಮೇಲಣ ಋಣಭಾರಗಳು ಯಾವುದಾದರೂ ಇದ್ದರೆ | | |
| 10. | ಡಿಮಾಂಡ್ ಡ್ರಾಫ್ಟ್/ಚಲನ್ ನಂ. ಮತ್ತು ಅರ್ಜಿಯ ಫೀಜಾದ 100 ರೂ. (ಒಂದು ನೂರು ರೂಪಾಯಿಗಳು) ಗಳನ್ನು ಸಂದಾಯ ಮಾಡಿದ ದಿನಾಂಕ | | |

ಸ್ಥಳ:

ದಿನಾಂಕ: ಅರ್ಜಿದಾರನ ಸಹಿ

---

## ಪ್ರಪತ್ರ II
[ನಿಯಮ 7ನ್ನು ನೋಡಿ]
ಕ್ರಯಪತ್ರ

19 ...................... ರ ....................ನೇ ದಿನಾಂಕದಂದು, ಇದರಲ್ಲಿ ಇನ್ನು ಮುಂದೆ 'ಮಾರಾಟಗಾರನೆಂದು' ಕರೆಯಲಾಗುವ ಕಮೀಷನರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಈ ಅಭಿವ್ಯಕ್ತಿಯು ಅವರ ಪದದಲ್ಲಿನ ಉತ್ತರಾಧಿಕಾರಿಗಳನ್ನು ಒಳಗೊಳ್ಳುತ್ತವೆ ಎಂದರ್ಥ) ಇವರು ಒಂದು ಕಡೆ ಮತ್ತು ........................ರಲ್ಲಿ ವಾಸಿಸುವ ................... ವಯೋಮಾನದ ................... ರವರ ಮಗ, ಮಗಳು, ವಿಧವೆಯಾದ ಶ್ರೀ/ಶ್ರೀಮತಿ ................... (ಈ ಅಭಿವ್ಯಕ್ತಿಯು ಅವನ/ಅವಳ ವಾರಸುದಾರರು, ನಿರ್ವಾಹಕರು, ಆಡಳಿತಗಾರರು ಮತ್ತು ಹಸ್ತಾಂತರಣಕಾರರನ್ನು ಒಳಗೊಳ್ಳುತ್ತದೆ ಎಂದರ್ಥ) ಇವರು ಮತ್ತೊಂದು ಕಡೆ ಸಾಕ್ಷಿಯಾಗಿ ಬೆಂಗಳೂರಿನಲ್ಲಿ ಈ ಕ್ರಯಪತ್ರವನ್ನು ಮಾಡಿಕೊಂಡಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಭೂಮಿಯನ್ನು ಸ್ವಇಚ್ಛೆಯಿಂದ ಬಿಟ್ಟು ಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆ) ನಿಯಮಗಳು, 1989ರ ಮೇರೆಗೆ ................. ಹಂಚಿಕೆ ಪತ್ರ ಸಂಖ್ಯೆಯ ಮೇರೆಗೆ ಈ ಕೆಳಗಿನ ಅನುಸೂಚಿಯಲ್ಲಿ ಪೂರ್ಣವಾಗಿ ವಿವರಿಸಲಾಗಿರುವ ...............

ಸಂಖ್ಯೆಯ ನಿವೇಶನವನ್ನು ಮಾರಾಟಗಾರನು, ಖರೀದಿದಾರನಿಗೆ ಪೂರ್ಣವಾಗಿ ಮಾರಾಟದಲ್ಲಿ ಹಂಚಿಕೆ ಮಾಡಿರುವುದರಿಂದ.

ಖರೀದಿದಾರನು .................... ರೂಪಾಯಿಯನ್ನು ನಗದಿನಲ್ಲಿ/ .................... ಸಂಖ್ಯೆಯ ಡಿಡಿ ಮೂಲಕ ನಿವೇಶನದ ಪೂರ್ಣ ಮೌಲ್ಯವನ್ನು ಸಂದಾಯ ಮಾಡಿದ್ದು ಮಾರಾಟಗಾರನು ಅದನ್ನು ಸ್ವೀಕರಿಸಿರುವುದಕ್ಕೆ ಒಪ್ಪಿಕೊಂಡಿರುವುದರಿಂದ ಈಗ ಈ ಕರಾರುನಾಮೇಯ, ಮಾರಾಟಗಾರನು ನಿರುಪಾದಿಕ ಮಾಲೀಕನಾಗಿ ಖರೀದಿದಾರನಿಂದ ..................... ರೂಪಾಯಿಗಳ ಮೌಲ್ಯದ ಪ್ರತಿಫಲವನ್ನು ಸ್ವೀಕರಿಸಿದುದಕ್ಕೆ ಸಾಕ್ಷಿಯಾಗಿದ್ದು, ಈ ಮೂಲಕ ಖರೀದಿದಾರನನ್ನು ಅನುಸೂಚಿತ ನಿವೇಶನದ ವಾಸ್ತವ ಸ್ವಾಧೀನಕ್ಕೆ ಒಳಪಡಿಸುತ್ತದೆ ಮತ್ತು ಎಲ್ಲಾ ಸ್ವಾತಂತ್ರ್ಯ ವಿಶೇಷಾಧಿಕಾರಗಳು, ಅನುಭೋಗ ಮತ್ತು ಸದರಿ ಸ್ವತ್ತಿಗೆ ಸೇರಿಕೊಂಡಿರುವ ಯಾವುದಾದರೊಂದಿಗೆ ಎಲ್ಲಾ ಪೂರ್ವಾಧಿಗಳು, ಕಾನೂನುಬದ್ಧ ಹೊರದೂಡುವಿಕೆ, ತೆರಿಗೆ ಬಾಕಿಗಳು, ಇತರ ಬಾಕಿಗಳು ಮತ್ತು ಯಾವುದೇ ರೀತಿಯ ಕ್ಲೇಮುಗಳಿಂದ ಮುಕ್ತವಾಗಿಸಿ ಅವನ/ಅವಳ ವೈಯಕ್ತಿಕ ಮತ್ತು ನಿರುಪಾದಿಕ ಸ್ವತ್ತು ಎಂಬಂತೆ ಖರೀದಿದಾರನಿಗೆ ಅನುಸೂಚಿತ ನಿವೇಶನದ ಎಲ್ಲಾ ಮುಖ್ಯ ಭಾಗವನ್ನು ಪಡೆಯಲು, ಧಾರಣ ಮಾಡಲು ಮತ್ತು ಅದನ್ನು ಸದಾಕಾಲ ಶಾಂತಿಯುತವಾಗಿ ಅನುಭವಿಸಲು ಒಪ್ಪಿಸುತ್ತದೆ.

ಮಾರಾಟಗಾರನು, ಈ ಕೆಳಗೆ ವಿವರಿಸಲಾಗಿರುವ ಅನುಸೂಚಿತ ಭೂಮಿಯನ್ನು ಯಾರೊಬ್ಬರಿಗೂ ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಿಲ್ಲವೆಂದು ಮತ್ತು ಮಾರಾಟಗಾರನಿಂದಾಗಲಿ ಅಥವಾ ಅವನ ನ್ಯಾಸದಲ್ಲಿರುವುದರ ಮೂಲಕ ಕ್ಲೇಮು ಮಾಡುವ ಯಾರಿಂದಾಗಲೀ ಎಲ್ಲಾ ಪೂರ್ವಾಧಿಗಳಿಂದ ಸದರಿ ನಿವೇಶನಗಳು ಮುಕ್ತವಾಗಿದೆಯೆಂದು ಭರವಸೆ ನೀಡುತ್ತಾನೆ.

ಅಲ್ಲದೆ ಮಾರಾಟಗಾರನು ಸಂದರ್ಭಗಳು ಅಗತ್ಯಪಡಿಸಿದಾಗಲೆಲ್ಲ ಅಂಥ ಎಲ್ಲಾ ಕೃತ್ಯಗಳನ್ನು ಮಾಡಲು ಅಥವಾ ಮಾಡುವಂತೆ ಮಾಡಲು ಮತ್ತು ಮಾರಾಟದ ಬಗ್ಗೆ ಹೆಚ್ಚು ನಿಷ್ಕೃಷ್ಟವಾಗಿ ಭರವಸೆ ನೀಡಲು ಅಥವಾ ದೃಢಪಡಿಸಲು ಮತ್ತು ಖರೀದಿದಾರನನ್ನು ಎಲ್ಲಾ ಕೃತ್ಯಗಳು, ದಾವೆಗಳು, ಕ್ಲೇಮುಗಳು, ತಗಾದೆಗಳು ಮತ್ತು ಸದರಿ ಒಡಂಬಡಿಕೆಗಳ ಅಥವಾ ಅವುಗಳ ಪೈಕಿ ಯಾವುದೊಂದರ ಯಾವುದೇ ಉಲ್ಲಂಘನೆಯ ಕಾರಣದಿಂದ ಅಥವಾ ಅದಕ್ಕಾಗಿ ಗುರಿಯಾದ ನಷ್ಟಗಳು ಮತ್ತು ಉಂಟಾದ ಹಾನಿಯ ವಿರುದ್ಧ ಖರೀದಿದಾರನಿಗೆ ನಷ್ಟ ಭರ್ತಿ ಮಾಡಿಕೊಡಲು ಹೊಣೆಗಾರನಾಗಿರುತ್ತಾನೆ.

ಈ ಕ್ರಯಪತ್ರವು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಭೂಮಿಯನ್ನು ಸ್ವಇಚ್ಛೆಯಿಂದ ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆ) ನಿಯಮಗಳು, 1989ರಲ್ಲಿ ನಿರ್ದಿಷ್ಟಪಡಿಸಿರುವ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಮತ್ತು ಸದರಿ ನಿರ್ಬಂಧಗಳು ಮತ್ತು ಷರತ್ತುಗಳು, ಕ್ರಯಪತ್ರದ ಒಂದು ಭಾಗವಾಗಿರುವುದು ಎಂದು ಭಾವಿಸತಕ್ಕದ್ದು.

**ಅನುಸೂಚಿ**

.......................................... ಬಡಾವಣೆಯಲ್ಲಿರುವ .................... ಬ್ಲಾಕ್‌ನಲ್ಲಿರುವ .......... ಸಂಖ್ಯೆಯನ್ನು ಹೊಂದಿರುವ, ಪೂರ್ವದಿಂದ ಪಶ್ಚಿಮಕ್ಕೆ .................... ಅಡಿಗಳು, ಉತ್ತರದಿಂದ ದಕ್ಷಿಣಕ್ಕೆ ............................ ಅಡಿಗಳ ಅಳತೆಯ ಈ ಭೂಮಿಯ ಚಕ್ಕುಬಂದಿ ಈ ಮುಂದಿನಂತಿದೆ ಎಂದರೆ.-





ಪೂರ್ವಕ್ಕೆ

ಪಶ್ಚಿಮಕ್ಕೆ

ಉತ್ತರಕ್ಕೆ

ದಕ್ಷಿಣಕ್ಕೆ

ಇದಕ್ಕೆ ಸಾಕ್ಷಿಯಾಗಿ ಮಾರಾಟಗಾರನು ಮೇಲೆ ಸೂಚಿಸಿರುವ ವರ್ಷ, ತಿಂಗಳು ಮತ್ತು ದಿನಾಂಕದಂದು ಬೆಂಗಳೂರಿನಲ್ಲಿ ತನ್ನ ಮುದ್ರೆ ಸಹಿ ಹಾಕಿದ್ದಾನೆ.

ಮಾರಾಟಗಾರ,
ಕಮೀಷನರ್,
ನಗರಾಭಿವೃದ್ಧಿ ಪ್ರಾಧಿಕಾರ

ಸಾಕ್ಷಿದಾರರು:

1.

2.

---

ಅನುಬಂಧ

**ಪ್ರೋತ್ಸಾಹದಾಯಕ ಯೋಜನೆಯ ಮೇರೆಗೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೂಲ ಭೂ ಮಾಲೀಕರಿಗೆ ಮಂಜೂರು ಮಾಡಲು ಪ್ರಸ್ತಾವಿಸಲಾಗಿರುವ ನಿವೇಶನಗಳ ವಿಸ್ತೀರ್ಣ**

| ಕ್ರಮ ಸಂಖ್ಯೆ | ಮೂಲ ಭೂ ಮಾಲೀಕನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸ್ವಇಚ್ಛೆಯಿಂದ ಬಿಟ್ಟುಕೊಡಲಾದ ಜಮೀನಿನ ವಿಸ್ತೀರ್ಣ | ನಗರಾಭಿವೃದ್ಧಿ ಪ್ರಾಧಿಕಾರದಿಂದ ಪ್ರೋತ್ಸಾಹದಾಯಕ ಯೋಜನೆಯ ಮೇರೆಗೆ ಮಂಜೂರು ಮಾಡಲು ಪ್ರಸ್ತಾವಿಸಲಾಗಿರುವ ನಿವೇಶನಗಳ ವಿಸ್ತೀರ್ಣ | | ಷರಾ |
|---|---|---|---|---|
| | | ವಿಸ್ತೀರ್ಣ | ವಿಸ್ತೀರ್ಣ ಚದರ ಅಡಿಗಳಲ್ಲಿ | |
| (1) | (2) | (3) | (4) | (5) |
| 1. | 10 ಗಂಟೆಗಳು 1/2 ಎಕರೆಯವರೆಗೆ | 20′ X 30′ (ಒಂದು ನಿವೇಶನ) | 600 | |
| 2. | 1/2 ಎಕರೆಯಿಂದ 1 ಎಕರೆಯವರೆಗೆ | 30′ X 40′ (ಒಂದು ನಿವೇಶನ) | 1,200 | |
| 3. | 1 ಎಕರೆಯವರೆಗೆ | 30′ X 40′ (ಒಂದು ನಿವೇಶನ) | 1,200 | |
| 4. | 1 ಎಕರೆಗೆ ಮೀರಿದ್ದು ಆದರೆ 2 ಎಕರೆಗಳನ್ನು ಮೀರದ | 40′ X 60′ (ಒಂದು ನಿವೇಶನ) | 2,400 | |
| 5. | 2 ಎಕರೆಯನ್ನು ಮೀರಿದ್ದು ಆದರೆ 3 ಎಕರೆಗಳನ್ನು ಮೀರದ | (i) 40′ X 60′ (ಒಂದು ನಿವೇಶನ)<br>(ii) 30′ X 40′ (ಒಂದು ನಿವೇಶನ) | 3,600 | |
| 6. | 3 ಎಕರೆಯನ್ನು ಮೀರಿದ್ದು ಆದರೆ 4 ಎಕರೆಗಳನ್ನು ಮೀರದ | (i) 40′ X 60′ (ಎರಡು ನಿವೇಶನಗಳು) | 4,800 | |

| | | | | |
|---|---|---|---|---|
| 7. | 4 ಎಕರೆಯನ್ನು ಮೀರಿದ್ದು ಆದರೆ 5 ಎಕರೆಗಳನ್ನು ಮೀರದ | (i) 40′ X 60′ (ಎರಡು ನಿವೇಶನಗಳು)<br>(ii) 30′ X 40′ (ಒಂದು ನಿವೇಶನ) | 6,000 | |
| 8. | 5 ಎಕರೆಯನ್ನು ಮೀರಿದ್ದು ಆದರೆ 6 ಎಕರೆಗಳನ್ನು ಮೀರದ | 40′ X 60′ (3 ನಿವೇಶನಗಳು) | 7,200 | |
| 9. | 6 ಎಕರೆಯನ್ನು ಮೀರಿದ್ದು ಆದರೆ 7 ಎಕರೆಗಳನ್ನು ಮೀರದ | (i) 40′ X 60′ (3 ನಿವೇಶನಗಳು)<br>(ii) 30′ X 40′ (ಒಂದು ನಿವೇಶನ) | 8,400 | |
| 10. | 7 ಎಕರೆಯನ್ನು ಮೀರಿದ್ದು ಆದರೆ 8 ಎಕರೆಗಳನ್ನು ಮೀರದ | 40′ X 60′ (4 ನಿವೇಶನಗಳು) | 9,600 | |
| 11. | 8 ಎಕರೆಯನ್ನು ಮೀರಿದ್ದು ಆದರೆ 9 ಎಕರೆಗಳನ್ನು ಮೀರದ | (i) 40′ X 60′ (4 ನಿವೇಶನಗಳು)<br>(ii) 30′ X 40′ (ಒಂದು ನಿವೇಶನ) | 10,800<br>– " – | |
| 12. | 10 ಎಕರೆಗಳಿಗಿಂತ ಮೇಲ್ಪಟ್ಟು | 40′ X 60′ (5 ನಿವೇಶನಗಳು) | 12,000 | |

**ಸೂಚನೆ.**–ಬಿಟ್ಟುಕೊಡಲಾದ 10 ಗುಂಟೆಗಳಿಗಿಂತ ಕಡಿಮೆ ಇರುವ ಭೂಮಿಗೆ ಮಾತ್ರ ನಷ್ಟ ಪರಿಹಾರದ ಹಣವನ್ನು ಸಂದಾಯ ಮಾಡಲಾಗುವುದು.

---





## [1]ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಭೂಮಿಯನ್ನು ಸ್ವಇಚ್ಛೆಯಿಂದ ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆ) (ತಿದ್ದುಪಡಿ) ನಿಯಮಗಳು, 1998

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34) 71ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಭೂಮಿಯನ್ನು ಸ್ವಇಚ್ಛೆಯಿಂದ ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆ) ನಿಯಮಗಳು, 1991ಕ್ಕೆ ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ.–

**1. ಹೆಸರು ಮತ್ತು ಪ್ರಾರಂಭ.**–(1) ಈ ನಿಯಮಗಳನ್ನು **ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಭೂಮಿಯನ್ನು ಸ್ವಇಚ್ಛೆಯಿಂದ ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆ) (ತಿದ್ದುಪಡಿ) ನಿಯಮಗಳು, 1998** ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 4ನೇ ನಿಯಮದ ತಿದ್ದುಪಡಿ.**–ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಭೂಮಿಯನ್ನು ಸ್ವಇಚ್ಛೆಯಿಂದ ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆ) ನಿಯಮಗಳು, 1991ರ 4ನೇ ನಿಯಮದ ಖಂಡ (ಎ)ದಲ್ಲಿ "ನಿವೇಶನದ ಮೌಲ್ಯದ ಶೇಕಡಾ 50ನ್ನು" ಎಂಬ ಪದಗಳಿಗೆ ಮತ್ತು ಅಂಕಿಗಳಿಗೆ ಬದಲಾಗಿ "ನಿವೇಶನದ ಮೌಲ್ಯದ ಪೂರ್ತಾ ಹಣವನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

---

1. ದಿನಾಂಕ 22-4-1998ರ ಕರ್ನಾಟಕ ರಾಜ್ಯ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ನಅಇ 2 ಎಂಐಬಿ 98, ದಿನಾಂಕ 17-4-1998